### ○ ಸಂಶೋಧನೆಗಳಿಗೆ ರೈತರ ಸಲಹೆ

# ಕೃಷಿ ಸಂಶೋಧನೆಗಳ ಪ್ರಜಾತಾಂತ್ರೀಕರಣ

# ಡಿಸೆಂಬರ್‌ನಲ್ಲಿ 'ಪ್ರಜಾತೀರ್ಪು'

ಧಾರವಾಡ, 20- ಕರ್ನಾಟಕದಲ್ಲಿ ಕೃಷಿ ಸಂಶೋಧನೆಗಳ ಪ್ರಜಾತಾಂತ್ರೀಕರಣ ಆಶಯದೊಂದಿಗೆ ನಾಡಿನ ಎಲ್ಲೆಡೆ ರೈತರಿಗಾಗಿ ಪ್ರಜಾತೀರ್ಪು ಎಂಬ ವಿಶಿಷ್ಟ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಡಿಸೆಂಬರ್ ಮೊದಲ ವಾರದಲ್ಲಿ ಏರ್ಪಡಿಸಲಾಗುತ್ತಿದೆ ಎಂದು ಹೈದರಾಬಾದಿನ ಡೆಕ್ಕನ್ ಡೆವಲಪ್‌ಮೆಂಟ್ ಸೊಸೈಟಿ ಪಿ. ವಿ. ಸತೀಶ ಹೇಳಿದರು.



ಪತ್ರಿಕಾಗೋಷ್ಠಿಯಲ್ಲಿ ಈ ವಿಷಯವನ್ನು ಸೋಮವಾರ ತಿಳಿಸಿದ ಅವರು, ಕೃಷಿ ರಂಗದ ಇತ್ತೀಚಿನ ಸಂಶೋಧನೆಗಳು ಎಲ್ಲ ರೈತರಿಗೆ ಮುಟ್ಟುತ್ತಿಲ್ಲ. ಯಾವುದೇ ಸಂಶೋಧನೆ ಮಾಡುವ ಮೊದಲು ಗ್ರಾಮೀಣ ಪ್ರದೇಶಗಳಲ್ಲಿನ ರೈತರಿಂದ ಸಲಹೆಗಳನ್ನು ಪಡೆದು ಕೈಗೊಳ್ಳುವಂತೆ ಮಾಡುವುದೇ ಈ ಕಾರ್ಯಕ್ರಮದ ಪ್ರಮುಖ ಉದ್ದೇಶವಾಗಿದೆ ಎಂದು ತಿಳಿಸಿದರು.

ಕೃಷಿ ಮಾಧ್ಯಮ ಕೇಂದ್ರ ಸೇರಿದಂತೆ ಅನೇಕ ಸಮಾನ ಮನಸ್ಕ ಸಂಘಟನೆಗಳೊಂದಿಗೆ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು. ಇದಕ್ಕಾಗಿ ಒಂದು ಸಮಿತಿ ರಚಿಸುವ ಉದ್ದೇಶವೂ ಇದ್ದು ಈ ಸಮಿತಿಯಲ್ಲಿ ಎಂ. ಎನ್. ವೆಂಕಟಾಚಲ, ಡಾ. ಸುದರ್ಶನ, ಡಾ. ದ್ವಾರಕಿನಾಥ ಸೇರಿದಂತೆ ಅನೇಕ ಗಣ್ಯರು ಇದ್ದಾರೆ. ಇವರ ಉಸ್ತುವಾರಿಯಲ್ಲಿ ಪ್ರಜಾತೀರ್ಪು ನಡೆಸಲಾಗುವುದು. ಹೀಗೆ ರೈತರು ನೀಡಿದ ತೀರ್ಪುಗಳನ್ನು ಸರಕಾರಗಳ ಮುಂದೆ ಇಡಲಾಗುವುದು ಎಂದು ತಿಳಿಸಿದರು.

ದೇಶದ ವ್ಯವಸಾಯ ಕ್ಷೇತ್ರದ ಮುನ್ನಡೆಗೆ ತಾನೇ ಕಾರಣ ಎಂದು ಹೇಳಿಕೊಳ್ಳುತ್ತಿರುವ ಸಂಶೋಧನಾ ರಂಗ ಹಸಿರು ಕ್ರಾಂತಿಯಿಂದ ಭಾರತೀಯ ಕೃಷಿರಂಗದ ಮೇಲಾಗಿರುವ ವ್ಯತಿರಿಕ್ತ ಪರಿಣಾಮಗಳ ಹೊಣೆ ಹೊತ್ತುಕೊಳ್ಳಲು ನಿರಾಕರಿಸುತ್ತಿದೆ ಎಂದು ಹೇಳಿದರು.

ಕೃಷಿ ಸಂಶೋಧನಾ ವಲಯ ಬಹುರಾಷ್ಟ್ರೀಯ ಕಂಪನಿಗಳಿಂದ ನಿರ್ದೇಶಿಸಲ್ಪಡುತ್ತದೆ. ಇದರಿಂದಾಗಿ ಕೃಷಿ ಸಂಶೋಧನೆಗಳು ಜೈವಿಕ ತಂತ್ರಜ್ಞಾನ ಮತ್ತು ಕುಲಾಂತರಿ ತಂತ್ರಜ್ಞಾನದತ್ತ ವಾಲತೊಡಗಿದೆ. ರೈತರ ಅಗತ್ಯಾಧರಿತ ಸಂಶೋಧನೆ ನೇಪಥ್ಯಕ್ಕೆ ಸರಿದು ಬಹುರಾಷ್ಟ್ರೀಯ ಕಂಪನಿಗಳ ಹಿತಕಾಯುವ ಸಂಶೋಧನೆಗಳೇ ಮೇಲುಗೈ ಸಾಧಿಸುವ ದಿನಗಳು ಸನ್ನಿಹಿತವಾಗಿವೆ.

ಇಂತಹ ಸಂಶೋಧನೆಗಳು ಹೆಚ್ಚು ಬಂಡವಾಳ ಮತ್ತು ಹೆಚ್ಚು ಬಾಹ್ಯ ಒಳಸುರಿಗಳ ಅಗತ್ಯವಿರುವ ಮಣ್ಣಿನ ಆರೋಗ್ಯ ಮತ್ತು ಜೀವವೈವಿಧ್ಯಕ್ಕೆ ಮಾರಕವಾಗಿರುವ ಕೃಷಿ ಪದ್ಧತಿಯನ್ನು ನಮ್ಮ ರೈತರ ಮೇಲೆ ಹೇರುವುದರಿಂದ ಕೃಷಿರಂಗ ಇನ್ನಷ್ಟು ಅತಂತ್ರಗೊಳ್ಳುವ ಭೀತಿ ಎದುರಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು.

ದಕ್ಷಿಣ ಏಷ್ಯಾಕ್ಕೆ ಸಂಬಂಧಿಸಿದಂತೆ ಹೈದರಾಬಾದ್‌ನ ಡೆಕ್ಕನ್ ಡೆವಲಪ್‌ಮೆಂಟ್ ಸೊಸೈಟಿ ನೇತೃತ್ವದಲ್ಲಿ ಆದರ್ಶ ಎಂಬ ಕೂಟ ರಚನೆಯಾಗಿದ್ದು ಇದರ ಮೂಲಕ ಈಗಾಗಲೇ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಹಿಂದೆ ಆಂಧ್ರಪ್ರದೇಶದ ಮೇಡಕ್ ಜಿಲ್ಲೆಯ ಅಲ್ಗೋಲ್ ಗ್ರಾಮದಲ್ಲಿ ಪ್ರಜಾತೀರ್ಪು ಕಾರ್ಯಕ್ರಮ ಆಯೋಜಿಸಲಾಗಿತ್ತು. ರೈತರೇ ತಮಗೆ ಎಂತಹ ಕೃಷಿ ಪದ್ಧತಿ ಬೇಕು ಎಂಬ ತೀರ್ಪು ನೀಡಿದ್ದರು. ಇಲ್ಲಿಯೂ ರೈತರು ನೀಡಿದ ತೀರ್ಪನ್ನು ಸರಕಾರಗಳ ಮುಂದೆ ಇಡುವುದಾಗಿ ತಿಳಿಸಿದರು.

ಬ್ಯಾಂಕುಗಳು ರೈತರಿಗೆ ಸಾಲ ನೀಡುವ ಪ್ರಕ್ರಿಯೆ ಸರಿಯಾಗಿಲ್ಲ. ವ್ಯವಸಾಯದ ಗುಣಗಳನ್ನು ನೋಡಿ ಅವರಿಗೆ ಸಾಲ ನೀಡಬೇಕು ಮತ್ತು ರೈತರ ಎಲ್ಲವನ್ನು ಗಮನದಲ್ಲಿಟ್ಟುಕೊಂಡು ಕೃಷಿ ನೀತಿ ಅನುಸರಿಸಬೇಕು. ಒಟ್ಟಾರೆ ಎಲ್ಲ ಅಂಶಗಳನ್ನೊಳಗೊಂಡ ಪತ್ರವನ್ನು ಎಲ್ಲ ಸಂಸತ್ ಸದಸ್ಯರಿಗೆ ನೀಡಲಾಗುವುದು ಎಂದು ತಿಳಿಸಿದರು.

ಅಪ್ಪಿಕೋ ಚಳವಳಿಯ ಪಾಂಡುರಂಗ ಹೆಗಡೆ, ಧಾರವಾಡದ ಪರ್ಯಾಯ ಕೃಷಿ ಮಾಧ್ಯಮ ಕೇಂದ್ರದ ಅನಿತಾ ಪೈಲೂರ ಮುಂತಾದವರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.